# ಸಂಗೀತ ಮತ್ತು ಶ್ರೋತೃ

ರಾ.ಸ.ನಂದಕುಮಾರ್

ಸಂಗೀತವನ್ನೂ ಮತ್ತು ಅದರ ಸೌಂದರ್ಯವನ್ನು ಆಸ್ವಾದಿಸಲು ಅನುಭವಿಸಲು ಶ್ರೋತೃವಿನಲ್ಲಿ ಅತ್ಯಾವಶ್ಯಕವಾಗಿ ಇರಬೇಕಾದ ಅಂಶವೆಂದರೆ ಅಭಿರುಚಿ. ತಮ್ಮ ಅಭಿರುಚಿಯನ್ನು ಅವರ ದೇಶ, ಕಾಲ ಮತ್ತು ಸಂಸ್ಕೃತಿಯನ್ನಾಧರಿಸಿ ಶ್ರೋತೃಗಳು ಬೆಳೆಸಿಕೊಂಡಿರುತ್ತಾರೆ,

ಸಂಗೀತಾಭಿರುಚಿಯು ಮಾನವರಲ್ಲಿ ಅತ್ಯಂತ ಸಹಜವಾದುದು. ಶಾಂತಿಗಾಗಿಯೋ ಅಥವಾ ಉದ್ರೇಕಗೊಳಿಸಲೆಂದೋ, ರಾಗವನ್ನು ಬೆಳೆಸಲೆಂದೋ ದ್ವೇಷವನ್ನು ಉದ್ದೀಪನಗೊಳಿಸಲೆಂದೋ, ಮಮತೆಗೋ ಸಂನ್ಯಾಸಭಾವಕ್ಕೋ, ಸಾಮಾಜಿಕ ಮೌಲ್ಯಪ್ರಸಾರಕ್ಕೋ ಧರ್ಮದ ಪ್ರಸಾರಕ್ಕೋ ಒಂದಲ್ಲ ಒಂದು ರೀತಿಯಲ್ಲಿ ಎಲ್ಲ ಜನಾಂಗದವರೂ ಎಲ್ಲ ದೇಶದವರೂ ಎಲ್ಲ ಕಾಲದಲ್ಲೂ ಸಂಗೀತವನ್ನು ಬಳಸುತ್ತಲೇ ಬಂದಿದ್ದಾರೆ. ಇದೊಂದು ಚಾರಿತ್ರಿಕಸತ್ಯ.

ಹಾಗಾದರೆ ಸಂಗೀತವೆಂದರೇನು? ಭಾರತೀಯ ಸಂಗೀತ ಶಾಸ್ತ್ರಗಳು ಸಂಗೀತವೆಂದರೆ ಗೀತ (ಹಾಡು), ವಾದ್ಯ ಮತ್ತು ನರ್ತನಗಳ ಒಕ್ಕೂಟ ಎಂದು ವರ್ಣಿಸುತ್ತದೆ. ಇದನ್ನು ಪ್ರಾಚೀನ ಕಾಲದಿಂದಲೂ ಸರ್ವೇಸಾಮಾನ್ಯವಾಗಿ ಎಲ್ಲರೂ ಒಪ್ಪುತ್ತಲೇ ಬಂದಿದ್ದಾರೆ. ಗೀತವೆಂದರೆ ಹಾಡು, ಇದು ಎಲ್ಲ ಪ್ರಕಾರಗಳಿಗೂ ಅತಿಮುಖ್ಯವಾದುದು, ಇದಿಲ್ಲದೆ ಗಾಯನವೂ ವಾದನವೂ ಮತ್ತು ನರ್ತನವೂ ಸಾಧ್ಯವಾಗುವುದಿಲ್ಲ. ಆದುದರಿಂದ ಗೀತವೇ ಸಂಗೀತದಲ್ಲಿ ಮುಖ್ಯವಾದುದೆಂದು ವರ್ಣಿಸಿ ಇಂತಹ ಗೀತವನ್ನು ಆಶ್ರಯಿಸಿದ ಗಾಯನ ವಾದನಗಳು ಸಂಗೀತವೆಂದೂ ಇಂತಹ ಸಂಗೀತವನ್ನು ಅವಲಂಬಿಸಿರುವುದು ನರ್ತನವೆಂಬ ಅಭಿಪ್ರಾಯ–ವಾದಗಳು ಕಾಲಕ್ರಮೇಣ ಬೆಳೆಯಿತು. ಆದರೆ ಇಂದು ಸಂಗೀತವೆಂದು ಗಾಯನ–ವಾದನಗಳಿಗೆ ಮಾತ್ರ ಹೇಳುತ್ತಾರೆ. ಒಂದು ರೀತಿಯಲ್ಲಿ ನೋಡಿದರೆ, ನಮ್ಮ ಸಂಗೀತವು ಬೆಳೆದುಬಂದ ರೀತಿಯು ತುಂಬ ಸ್ವಾರಸ್ಯಪೂರ್ಣವಾದುದು. ಅದರ ಬುನಾದಿಯನ್ನು ನಿರ್ಮಿಸಿದವರು ಋಷಿಮುನಿಗಳು, ಪರಂಪರೆಯನ್ನು ನಿರ್ಮಿಸಿ ಉಳಿಸಿದವರು ಯೋಗಿಗಳು, ದೊರೆಗಳು, ದಾರ್ಶನಿಕರು, ಯಾಜ್ಞಿಕರು, ಮಂತ್ರಸಿದ್ಧರು. ಇದು ನಮ್ಮ ಸಂಗೀತದ ವೈಶಿಷ್ಟ್ಯ: ಇದು ಇಂದಿಗೂ ಬಹುಮಟ್ಟಿಗೆ ನಿಜ.

ಹಾಗಾದರೆ ಇಂತಹ ಸಂಗೀತವನ್ನು ಆಸ್ವಾದಿಸುವ ಶ್ರೋತೃವೆಂದರೆ ಯಾರು? ಶ್ರೋತೃ ಎಂಬ ಪದಕ್ಕೆ ನಮ್ಮ ಕನ್ನಡ ನಿಘಂಟು ಕೇಳುವವರು, ಕಿವಿಗೊಟ್ಟು ಆಲಿಸುವವರು ಎಂಬ ಸಾಮಾನ್ಯಾರ್ಥವನ್ನು ಕೊಟ್ಟರೂ ಸಂಗೀತ ಪರಿಭಾಷೆಯಲ್ಲಿ ವಿಶೇಷವಾಗಿ ಉತ್ಸಾಹ ಉತ್ಸುಕತೆಗಳಿಂದ ಸಹಾನುಭೂತಿಯಿಂದ ಸಂಗೀತವನ್ನು ಆಸ್ವಾದಿಸಲು ಬಂದಿರುವವರು ಎಂದೇ ಆ ಶಬ್ದಾರ್ಥವನ್ನು ಅನ್ವಯಿಸಿ ಹೇಳುತ್ತೇವೆ.

ಸಂಗೀತಕ್ಕಾಗಿ ಶ್ರೋತೃಗಳು ಮತ್ತು ಶ್ರೋತೃವಿಗಾಗಿ ಸಂಗೀತ ಎಂಬ ಎರಡು ಬಗೆಯಾದ ಸಂಬಂಧವನ್ನು ಸೂಚಿಸಬಹುದು. ಒಂದು ಜನಾಂಗದ, ದೇಶದ ಸಂಗೀತವು ತನ್ನ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಬೆಳೆದ ಶ್ರೋತೃವಿಗಾಗಿ ರಚಿತವಾಗುತ್ತದೆ ರೂಪಗೊಳ್ಳುತ್ತದೆ. ಇಂತಹ ಶ್ರೋತೃವು ತನ್ನ ಸಮಾಜದಲ್ಲಿ ಸಂಗೀತವನ್ನು ಮೈಗೂಡಿಸಿಕೊಂಡು ತನ್ನ ಸಂಸ್ಕೃತಿಯಲ್ಲಿ ಅದು ಸ್ಥಿರವಾಗಿ ನಿಲ್ಲುವಂತೆ ಏರ್ಪಡಿಸಿಕೊಳ್ಳುತ್ತಾನೆ. ಆದುದರಿಂದ ಸಂಗೀತವು ಆ ಸಮಾಜದ ಒಂದು ಕನ್ನಡಿಯಾಗುತ್ತದೆ. ಕೆಲವೊಮ್ಮೆ ಭಾರತೀಯ ಸಂಗೀತವು ತನ್ನ ಸಮಾಜದ ಸಂಸ್ಕೃತಿಯನ್ನು ಮೀರಿ ಬೆಳೆದು ತನ್ನ ಆಂತರಿಕ ಮಹತ್ತುಗಳನ್ನೂ ಬೆಳೆಸಿಕೊಂಡು ಓರೆಕೋರೆಗಳನ್ನು ತಿದ್ದಿಕೊಂಡು ನವೋನ್ಮೇಷಶಾಲಿಯಾಗಿ ಮೆರೆಯುವುದನ್ನು ಚರಿತ್ರೆಯಲ್ಲಿ ನಾವು ಕಾಣಬಹುದು. ಇಂತಹ ಸನ್ನಿವೇಶದಲ್ಲಿ ಸಂಗೀತವು ತನ್ನ

ಶ್ರೋತೃವರ್ಗದ ಸಮಾಜದ ಸಂಸ್ಕಾರವನ್ನು ಉನ್ನತವಾಗಿ ಮೆರೆಯುವಂತೆ ಮಾಡುತ್ತದೆ. ಇದರಲ್ಲಿ ರಾಜಾಶ್ರಯದ, ಜನಾಶ್ರಯದ ಪಾತ್ರ ಬಹಳ ಮಹತ್ವದ್ದು.

ಸಹೃದಯ ಎಂಬ ಬಿರುದು ಉತ್ತಮ ಶ್ರೋತೃಗಳಿಗೆ ಇದೆ. ಹೃದಯಬಿಚ್ಚಿ, ಸಹಾನುಭೂತಿಯಿಂದ, ಕಲಾವಿದರಲ್ಲಿ ವಿಶೇಷವಾದ ಪ್ರೀತಿವಾತ್ಸಲ್ಯಗಳಿಂದ ಪ್ರಸ್ತುತಪಡಿಸಿದ ಕಲಾಕೌಶಲವನ್ನು ಹಂಸಕ್ಷೀರನ್ಯಾಯದಂತೆ ಉತ್ತಮವಾದುದುನ್ನು ಮಾತ್ರ ತೆಗೆದುಕೊಂಡು ದೋಷವನ್ನು ಕಡೆಗಾಣಿಸಿ ಅಥವಾ ತಿದ್ದಿಕೊಂಡು ಪ್ರಸನ್ನಚಿತ್ತರಾಗಿ ಕಲೆಯ ಸೌಂದರ್ಯವನ್ನು ಆಸ್ವಾದಿಸುವ ಶ್ರೋತೃವರ್ಗವನ್ನು ಎಲ್ಲ ಕಲಾವಿದರೂ ಬಯಸುತ್ತಾರೆ. ಅವರಿಗಾಗಿ ಹಂಬಲಿಸಿ ದುಡಿಯುತ್ತಾರೆ.

ಶ್ರೋತೃವರ್ಗವನ್ನು ನಾನಾವಿಧವಾಗಿ ವಿಂಗಡಿಸಬಹುದು: ಸಂಗೀತಪ್ರಸ್ತುತಿಯಲ್ಲಿ ಕೇವಲ ಮಾಧುರ್ಯವನ್ನು ಮಾತ್ರ ಅಪೇಕ್ಷೆ ಪಡುವವರು (ಒಂದು ಸಂಗೀತ ದೇಗುಲಕ್ಕೆ ಹೋಗಿ ಪ್ರಾಕಾರದಲ್ಲಿನ ಸುಂದರ ವಿಗ್ರಹಗಳನ್ನು ಮಾತ್ರ ನೋಡಿ ಆನಂದಿಸಿ ಆದರೆ ಮೂಲದೇವರನ್ನೇ ಕಾಣದೆ ಇರುವವರು), ಇನ್ನೇನೋ ಕೆಲಸಕಾರ್ಯ ಮಗ್ನರಾಗಿದ್ದಾಗಿ ಅದರಿಂದ ಸ್ವಲ್ಪ ವಿರಾಮಕ್ಕಾಗಿ ಸಂಗೀತವನ್ನು ಕೇಳುವವರು (ಕ್ಯಾಶುಅಲ್ ಕೇಳುಗರು), ಟೈಂಪಾಸ್‌ಗಾಗಿ ಸಂಗೀತವನ್ನು ಕೇಳುವವರು, ಕೃತಿಯಲ್ಲಿರುವ ಸಾಹಿತ್ಯಕ್ಕಾಗಿಯೋ ಅಥವಾ ಅದರ ಟ್ಯೂನ್‌ಗಾಗಿ ಆಲಿಸುವವರು, ಆಡಂಬರಕ್ಕಾಗಿ ಸಂಗೀತ ಕಛೇರಿಗೆ ಸಿಂಗರಿಸಿಕೊಂಡು ಹೋಗಿ ಸರೀಕರ ಗಮನವನ್ನು ಸೆಳೆಯಲು ಎಳಸುವವರು, ಯಾವರೀತಿಯ ತಾರತಮ್ಯವಿಲ್ಲದೆ, ಒಳ್ಳೆಯದು ಕೆಟ್ಟದ್ದು ಎಂಬ ಪರಿಜ್ಞಾನವಿಲ್ಲದೆ ಎಲ್ಲವನ್ನೂ ಅನನ್ಯವಾಗಿ ಆಲಿಸುವವರು, ಸಂಗೀತದ ಪರಿಭಾಷೆಯಲ್ಲಿ ಪರಿಣತರೂ ಸಂಗೀತಶ್ರವಣತೆಯಲ್ಲಿ ಉತ್ತಮ ಪರಿಶ್ರಮವುಳ್ಳವರೂ ಆಗಿ ಸಂಗೀತ ಕಛೇರಿಯಲ್ಲಿ ಒಳ್ಳೆಯ ಅಭಿರುಚಿಯಿಂದ ಆಲಿಸುವವರು (ಇಂಥವರು ಕಲಾವಿದರಿಗೆ ಸಹೃದಯಿಯಾಗಿ ಗೋಚರಿಸುತ್ತಾರೆ), ತಾವೇ ಸ್ವತಃ ಸಂಗೀತಗಾರರಾಗಿ ಇನ್ನೊಬ್ಬರ ಸಂಗೀತದಲ್ಲಿ ಅಸೂಯೆಯಿಂದಲೋ, ದ್ವೇಷದಿಂದಲೋ ದೋಷವನ್ನೇ ಎಣಿಸಲು ಹೋಗುವವರು, ಸಂಗೀತಗಾರರ ಬಗ್ಗೆ, ಅವರ ಜೀವನಚರಿತ್ರೆಯಿಂದ ಹಿಡಿದು ಅವರ ಸಂಗೀತದ ಎಲ್ಲ ಮಜಲುಗಳನ್ನು ಅಧ್ಯಯನಮಾಡಿ ಸಂಗೀತವನ್ನು ವಿಶೇಷವಾಗಿ ಕೇಳಲು ಹೋಗುವವರು (ಇಂಥವರಿಂದ ಸಂಗೀತಕ್ಕೂ ಕಲಾವಿದರಿಗೂ ತುಂಬ ಪ್ರಯೋಜನವಿದೆ), ಇನ್ನು ಕೆಲವರು ಇಂತಹ ಅಧ್ಯಯನ ಪರಿಶ್ರಮವನ್ನೇನೋ ಮಾಡಿರುತ್ತಾರಾದರೂ ತಮ್ಮ ಸಂಗೀತಜ್ಞಾನವೇ ಉತ್ತಮೋತ್ತಮವೆಂದು ನಂಬಿ ಪರರ ಅಭಿಪ್ರಾಯಗಳನ್ನು ಹೀಗಳೆಯುವವರು – ಹೀಗೆ ಶ್ರೋತೃಗಳ ವರ್ಗಾವಣೆಯ ಪಟ್ಟಿ ಬೆಳೆಯುತ್ತದೆ. ಇವರ ಜೊತೆ ಇನ್ನೊಂದು ಬಹುಮುಖ್ಯವಾದ ಶ್ರೋತೃವಿದ್ದಾನೆ, ಅದು ಕಲಾವಿದನೇ. ಅವನು ತನ್ನ ಕಲೆಯನ್ನು ತಾನೇ ಮೊದಲಿಗೆ ಚಿಕಿತ್ಸಕ ಬುದ್ಧಿಯಿಂದ ನಿರಹಂಕಾರವಾಗಿ ಆಲಿಸಿ ಆಸ್ವಾದಿಸಿದಾಗ ಮಾತ್ರ ಅವನ ಕಲೆಗೆ ಒಂದು ಹೊಸ ಮಿಂಚು, ಸ್ಫೂರ್ತಿ ಬರುತ್ತದೆ ಮತ್ತು ಅವನ ಕಲೆಯು ಸಾರ್ಥಕವಾಗುತ್ತದೆ.

ಇವಿಷ್ಟೇ ಅಲ್ಲದೆ ಇನ್ನೊಂದು ಪುಟ್ಟ ಶ್ರೋತೃವರ್ಗವಿದೆ. ಈ ವರ್ಗ ನಿಜಕ್ಕೂ ಕಲೆಗೆ, ಕಲಾವಿದರಿಗೆ ಒಂದು ವರಪ್ರದಾನ. ಇಂತಹವರು ಕಲೆಯನ್ನು ಆಡಂಬರವಿಲ್ಲದೆ ನಿರ್ಮಲವಾಗಿ ಆಸ್ವಾದಿಸುತ್ತಾರೆ. ಇವರ ಕಲಾಪ್ರೀತಿ ಅತ್ಯಂತ ನೈಜವಾದುದು. ಅವರ ಈ ಸಹೃದಯತೆಯನ್ನು ಮೆಚ್ಚುತ್ತಾ ವಿವರಿಸಿದರಂತೂ ಆಶ್ಚರ್ಯವೇ ಆಗಿಬಿಡುತ್ತದೆ ಅವರಿಗೆ. ಅಷ್ಟು ಸಹಜ ಅವರ ಕಲಾಸ್ವಾದ. ಸಂಗೀತವೆಂಬುದು ಅವರಿಗೆ ಸಹಜಸೌಂದರ್ಯಾನುಭವ, ದೈವೀದರ್ಶನ, ಉಲ್ಲಾಸದಾಯಕ ಆತ್ಮಪರೀಕ್ಷಣ ಮತ್ತು ಚೆತೋಹಾರಿ ಪರ್ಯಟನ. ಇಂತಹವರಲ್ಲಿ ಅತ್ಯಂತ ಶ್ರೇಷ್ಠಮಟ್ಟದ ಸಂಗೀತಕಛೇರಿಗಳ ಪ್ರಸ್ತುತಿಯ ಭಂಡಾರವೇ ಇರುತ್ತದೆ. ಅದನ್ನು ಅವರು ತುಂಬ ಕಾಳಜಿಯಿಂದ ಸಂಗ್ರಹಿಸಿ ಕಾಪಾಡಿಕೊಂಡಿರುತ್ತಾರೆ. ತಮ್ಮ ಬಿಡುವಿನ ವೇಳೆಯಲ್ಲಿ ಅದನ್ನು ತನ್ಮಯತೆಯಿಂದ ಮೈಮರೆತು ಸಾರ್ಥಕವಾಗಿ ಆಲಿಸುತ್ತಾರೆ. ಇವರು ಎಂದೆಂದೂ ತಮ್ಮ ಅಭಿಪ್ರಾಯವನ್ನು ಕಟುವಾಗಿ ತಿಳಿಸುವುದೇ ಇಲ್ಲ. ಹಾಗೊಮ್ಮೆ ನವುರಾಗಿ ಸೌಮ್ಯವಾಗಿ ವ್ಯಕ್ತಪಡಿಸಿದ್ದು ತುಂಬ ಅಮೂಲ್ಯವಾಗಿರುತ್ತದೆ. ಇಂತಹವರ ಕಲಾನುಭವವು ಒಬ್ಬ ಅಸಾಧಾರಣ ಸಂಗೀತ ಕಲಾವಿದನ ಉತ್ತಮೋತ್ತಮ ಪ್ರಸ್ತುತಿಯ ಆನಂದದ ಅನುಭವಕ್ಕೆ ಸಮನಾಗಿರುತ್ತದೆ. ಒಬ್ಬ ನಿಜಕಲಾವಿದನ ಅನನ್ಯ ಕಲಾರ್ಪಣವು ಇಂಥಹವರಿಗಾಗಿಯೇ ಮೀಸಲು.

ಈ ವಿವಿಧ ಶ್ರೋತೃವರ್ಗವನ್ನು ನಾವು ಇಂದು ಎಲ್ಲ ಸಂಗೀತಪ್ರಕಾರಗಳ ಪ್ರಸ್ತುತಿಯಲ್ಲಿ ಕಾಣುತ್ತೇವೆ. ಎಲ್ಲ ವರ್ಗದವರನ್ನೂ ತಲುಪಲು ಶಾಸ್ತ್ರೀಯ ಸಂಗೀತದವರಿಂದ ಮೊದಲುಗೊಂಡು ಎಲ್ಲ ಕಲಾವಿದರೂ ಪ್ರಯತ್ನಿಸುತ್ತಿದ್ದಾರೆ. ಇದಕ್ಕಾಗಿ ಅವರು ಪಡುತ್ತಿರುವ

ಪಾಡು–ಪೇಚು ಕೆಲವುವೇಳೆ ಹಾಸ್ಯಾಸ್ಪದವೂ ಹಾಸ್ಯಾಶ್ರಯವೂ ಆಗಿರುತ್ತದೆ. ಇದೊಂದು `Fusion'ಗಳ ಯುಗವಾಗಿದೆ. ವಿವಿಧ ರೀತಿಯ ಸಂಗೀತಗಳಲ್ಲೂ ವಿವಿಧ ದೇಶೀಸಂಸ್ಕೃತಿಯ ಸಂಗೀತಗಳಲ್ಲೂ ಅದರದೇ ಆದ Fashion ಗಳನ್ನು ಕಂಡುಕೊಂಡು ಅವನ್ನೆಲ್ಲ ಒಂದೆಡೆ ಕಲಸಿ ಕಲಸುಮೇಲೋಗರದಂತೆ Fusion Music ಪ್ರಸ್ತುತಪಡಿಸಲಾಗುತ್ತಿದೆ. ಕೆಲವೇ ಕೆಲವು ಸಾರ್ಥಕವಾದ ಮನನೀಯವಾದ ಪ್ರಯೋಗಗಳನ್ನು ಹೊರತುಪಡಿಸಿದರೆ ಮಿಕ್ಕೆಲ್ಲ Fusionಗಳು, confusionನ್ನೇ ಆಗಿದೆ. ಈ ಮಜಲು ಶಾಸ್ತ್ರೀಯಸಂಗೀತ, ಸುಗಮಸಂಗೀತ, ಸಿನೆಮಾಸಂಗೀತ (ಈ ಪ್ರವೃತ್ತಿ ಇತ್ತೀಚಿನ ಸಿನೆಮಾಪ್ರಸಂಗಗಳಲ್ಲಿ ಸಹಜವೆನ್ನಿಸುತ್ತಿದೆ) ಕಡೆಗೆ ಜನಪದಸಂಗೀತದಲ್ಲೂ ಹೊಕ್ಕಿದೆ. ಈ ಬೆಳವಣಿಗೆ ಕೆಲವು ವೇಳೆ ಭಾರತೀಯ ಸಂಸ್ಕೃತಿಯ ಬಗ್ಗೆ ಕಳಕಳಿಯನ್ನು ಇಟ್ಟುಕೊಂಡವರಲ್ಲಿ ಕಳವಳವನ್ನೂ ಭಯವನ್ನೂ ಉಂಟುಮಾಡುತ್ತಿದೆ.

ಕಲಾವಿದರನ್ನು ಅವರ ಕಲೆಯನ್ನು ಒಂದು ಸಂಗೀತ ಕಛೇರಿರಂಗವನ್ನೂ ಮೀರಿ ಅಸಂಖ್ಯಾತ ಶ್ರೋತೃವರ್ಗಕ್ಕೆ ತಲುಪಿಸಲು ಇಂದು ನಮ್ಮಲ್ಲಿ ಪ್ರಸಾರ ಮಾಧ್ಯಮಗಳಿವೆ. ಆಕಾಶವಾಣಿ, ದೂರದರ್ಶನಗಳಿಂದ ಹಿಡಿದು ಧ್ವನಿಸುರಳಿ (ಕ್ಯಾಸೆಟ್)ಗಳವರೆಗೆ ಮಾಧ್ಯಮಗಳು ಸಂಗೀತವನ್ನು ದಿನವಿಡೀ ವರ್ಷವಿಡೀ ಶ್ರೋತೃಗಳ ಮನ–ಮನೆಯಂಗಳಕ್ಕೇ ತೆಗೆದೊಯ್ಯುತ್ತಿವೆ. ಹೀಗಾಗಿ ಹೆಚ್ಚು ಹೆಚ್ಚು ಕಲಾವಿದರೂ ಅವರ ಕಲೆಯೂ ಶ್ರೋತೃಗಳನ್ನು ಯಶಸ್ವಿಯಾಗಿ ತಲುಪುತ್ತಿದ್ದಾರೆ. ಈ ಕಾಲ ಕಲಾವಿದರಿಗೊಂದು ಪರೀಕ್ಷೆಯ, ಅಪಾರ ಜವಾಬ್ದಾರಿಯ ಆದರೆ ಸುಭಿಕ್ಷ ಕಾಲ. ಕಲಾವಿದರು ತಮ್ಮ ಶ್ರೋತೃಗಳ ಮನರಂಜನೆಯೊಂದೇ ಗಮನದಲ್ಲಿಟ್ಟುಕೊಳ್ಳದೆ ಅವರಲ್ಲಿನ ಅಭಿರುಚಿ ಸಂವರ್ಧನೆಯನ್ನೂ ದೇಶಭಾವ ದುಂದುಭಿಯನ್ನೂ ಮೊಳಗಿಸುವಂತಿರಬೇಕು. ಶ್ರುತಿಶುದ್ಧಿ, ಸ್ವರಶುದ್ಧಿ, ಲಯಶುದ್ಧಿ, ಭಾವಾಂತರಂಗ ಶುದ್ಧಿಗಳಿಂದ ತಮ್ಮ ಸಂಗೀತವನ್ನು ಸಮೃದ್ಧಗೊಳಿಸಿ ಶ್ರೋತೃಗಳ ಹೃದಯವನ್ನು ತುಂಬಿಸಬೇಕು. ತಮ್ಮ ಸುಚರಿತೆ ಸುಶೀಲತೆಯನ್ನು ಸಂಗೀತದಲ್ಲಿ ಪ್ರತಿಬಿಂಬಿಸಬೇಕು – ಸಮಾಜಕ್ಕೆ ಉತ್ತಮ ಮಾದರಿಯಾಗಬೇಕು. ಇಂತಹ ಕಲಾವಿದರ ಪರಿಶ್ರಮವನ್ನು ಸಮಾಜವೂ ಅದರ ನಾಯಕರೂ ಗುರುತಿಸಿ ಅವರ ಕಲಾಕುಲವನ್ನು ಸಂರಕ್ಷಿಸಬೇಕು.

ಈ ಸಂದರ್ಭದಲ್ಲಿ ನಮ್ಮ ಹಿರಿಯರೊಬ್ಬರು ಹೇಳಿದ ಒಂದು ಕಥೆಯು ಜ್ಞಾಪಕಕ್ಕೆ ಬರುತ್ತಿದೆ. ಒಂದೂರಿನ ಒಬ್ಬ ರಾಜ ತುಂಬ ಅರಸಿಕ. ಸಂಗೀತದ ಬಗ್ಗೆ ಗಂಧವೂ ಇರಲಿಲ್ಲ, ಪಡೆಯಬೇಕೆಂಬ ಕಾಳಜಿಯೂ ಇರಲಿಲ್ಲ. ಸಂಗೀತವು ಅವನ ಧರ್ಮಕ್ಕೆ ವಿರುದ್ಧವಾಗಿತ್ತು. ಅವನ ರಾಜ್ಯವಾದರೊ ಉತ್ತಮೋತ್ತಮ ಸಂಗೀತ ಕಲಾವಿದರ ಬೀಡು, ಪ್ರತಿಭಾನ್ವಿತ ಸೃಜನಶೀಲರ ನಾಡು. ಅವರ ಪಾಡು ಹೇಳತೀರದು. ರಾಜನು ಸಂಗೀತದ ಚಕಾರವನ್ನೆತ್ತಲೂ ಅವಕಾಶವನ್ನೀಯುತ್ತಿರಲಿಲ್ಲ. ಸರಿ, ಸಹಾನುಭೂತಿವಂತನಾದ ಮಂತ್ರಿಯ ಸಮ್ಮುಖದಲ್ಲಿ ಕಲಾವಿದರೆಲ್ಲರೂ ಗುಟ್ಟಾಗಿ ಸಭೆ ಸೇರಿ ಚರ್ಚಿಸಿ ಒಂದು ಉಪಾಯವನ್ನು ಮಾಡಿದರು.

ಅಂದೊಂದು ದಿನ ಕಲಾವಿದರೆಲ್ಲರೂ ಸೇರಿ ಒಂದು ಶವಪಟ್ಟಿಗೆಯನ್ನು ಹೊತ್ತುಕೊಂಡು ಅತೀವ ಶೋಕವನ್ನು ವ್ಯಕ್ತಪಡಿಸುತ್ತಾ, ರಾಜಬೀದಿಯಲ್ಲಿ ರಾಜನನ್ನು ಎದುರುಗೊಳ್ಳುವಂತೆ ನಡೆದರು. ಆ ಅರಸಿಕ ಅರಸು ಈ ಮೆರವಣಿಗೆಯನ್ನು ಕಂಡು ನಿಲ್ಲಿಸಿ, ದೇಶೀ ನಡವಳಿಕೆಯಂತೆ ತನ್ನ ಸಂತಾಪವನ್ನು ವ್ಯಕ್ತಗೊಳಿಸಿ ಕೇಳಿದ 'ಎಲಾ, ಕಲಾವಿದರೇ, ಈ ಶವಪೆಟ್ಟಿಗೆಯಲ್ಲಿ ಸತ್ತು ಮಲಗಿರುವವರು ಯಾರು?'. ಆ ಕಲಾವಿದವೃಂದದ ವೃದ್ಧನೊಬ್ಬನು ಆಗ ಮುಂದೆ ಬಂದು 'ಸ್ವಾಮಿ, ಈ ಶವಪೆಟ್ಟಿಗೆಯಲ್ಲಿ ಇರುವವರ ಹೆಸರು ಸಂಗೀತ ಎಂದು. ನಿಮ್ಮ ರಾಜ್ಯದಲ್ಲಿ ಇದೊಂದು ಅತೀವ ದುಃಖ ಸಮಯ. ಇವರ ಅಕಾಲಿಕ ಮರಣದಿಂದ ರಾಜ್ಯದ ಸಂಸ್ಕೃತಿಯೂ ಸಪ್ಪಗಾಗಿದೆ ಕಳಾಹೀನವಾಗಿದೆ' ಎಂದ. ಇದನ್ನು ಆಲಿಸಿದ ಆ ಅರಸು ಸ್ವಲ್ಪಕಾಲ ಆಲೋಚಿಸಿ ಹೀಗೆ ಆಜ್ಞೆ ಮಾಡಿದ 'ಈ ಶವಪೆಟ್ಟಿಗೆಯನ್ನೂ ಅದರಲ್ಲಿರುವ ಸಂಗೀತವನ್ನೂ ನಮ್ಮ ರಾಜ್ಯದಿಂದ ಬಹುದೂರಕ್ಕೆ ಒಯ್ಯಿರಿ ಹಾಗೂ ಇವನ್ನು ಅತ್ಯಂತ ಆಳವಾದ ಗುಣಿಯನ್ನು ತೋಡಿ ಅದರಲ್ಲಿ ಹಾಕಿಬಿಟ್ಟು ಇನ್ನೆಂದು ಮೇಲೇರದಂತೆ ಮಣ್ಣಿನಿಂದ ತುಂಬಿಬಿಡಿ'. ಆಗ ಆ ಕಲಾವೃದ್ಧ ಮೆಲ್ಲನೆ ಗೆದ್ದೆವೆಂದು ನಸುನಕ್ಕನಂತೆ! ಏಕೆಂದರೆ ಒಂದು ದೇಶದ ಕಲೆಯ ನೆಲೆ ಅದರ ಮಣ್ಣಿನ ಸ್ವತ್ತು. ಇಂತಹ ಕಲೆಯು ಮತ್ತೆ ತನ್ನ ಮಣ್ಣನೆಲೆಯನ್ನು ಸೇರಿದಾಗ ಅದರ ಬೀಜ ಮೊಳೆತು, ಚಿಗುರೊಡೆದು, ಹೆಮ್ಮರವಾಗಿ ಕಲ್ಪವೃಕ್ಷವಾಗಿ ಬೆಳೆದು ತನ್ನ ಕುಲದಿಂದ ಬೆಂಗಾಡಾದ ನಾಡನ್ನು ಸ್ವರ್ಗವನವಾಗಿ ಪರಿವರ್ತಿಸವುದೆಂಬ ಸತ್ಯ ಆ ಅರಸಿಕ ಅರಸಿಗೆ ಹೇಗೆತಾನೇ ತಿಳಿಯಬೇಕು?

ಇದು ಹೀಗಿರುವಲ್ಲಿ, ಇಂದು ಮತ್ತೊಮ್ಮೆ ನಮ್ಮ ಸಂಗೀತವನ್ನೂ, ಅದರ ಶ್ರೋತೃವರ್ಗವನ್ನೂ ಮತ್ತು ನಮ್ಮ ಸಂಸ್ಕೃತಿಯ ದೃಷ್ಟಿಕೋನಗಳನ್ನೂ ಪರೀಕ್ಷಿಸಿಕೊಂಡು ಅದರ ಅಂತಃಸ್ಸತ್ವವನ್ನು ಕಂಡುಕೊಳ್ಳುವ ಕಾಲ ಬಂದಿದೆ. ಏಕೆಂದರೆ ನಮ್ಮ ಸಂಗೀತ–ಸಂಸ್ಕೃತಿಗಳು ಇಂದು ಒಂದು ಕವಲುದಾರಿಗೆ ಬಂದು ನಿಂತಿದೆ, ಈ ಸಂದಿಗ್ಧಕಾಲವನ್ನು ನಿವಾರಿಸಿ ಮತ್ತೆ ನಮ್ಮ ಭಾರತೀಯತೆಗೆ ಕೇಡಿಲ್ಲದ ಸುಸಂಗೀತದತ್ತ ಸುಸಂಸ್ಕೃತಿಯತ್ತ ನಾವು ತಿರುಗಬೇಕು ಮುನ್ನಡೆಯಬೇಕು.